ಭುವನಾ ಹಿರೇಮಠ ಎಂದು ಗುರುತಿಸಿಕೊಂಡಿರುವ ಭುವನೇಶ್ವರಿ ರಾಚಯ್ಯ ಹಿರೇಮಠ ಕವಯಿತ್ರಿಯಾಗಿ ಕನ್ನಡ ಸಾಹಿತ್ಯದ ಓದುಗರಿಗೆ ಪರಿಚಿತರು. ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಸೋಮನಟ್ಟಿ ಅವರ ಹುಟ್ಟೂರು. ಪ್ರಸ್ತುತ ಹಿರೇನಂದಿಹಳ್ಳಿಯ ಸರಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಕಿ. ಅವರ ಮೊದಲ ಕವನ ಸಂಕಲನ, 'ಟ್ರಯಲ್ ರೂಮಿನ ಅಪ್ಸರೆಯರು'

ಜಮೀನ್ದಾರನ ಮಗಳು. ಐಸಿರಿಯಿಂದು ಬೆಳೆದವಳು. ಗಟ್ಟಿಮುಟ್ಟು ಮೈಕಟ್ಟಿನವಳಾಗಿದ್ದ ಇವಳು ಉದ್ದಕೆ ಬೆಳೆದಿದ್ದಳು. ಇವಳು ಜಾಸ್ತಿ ಉದ್ದ ಇರುವುದ ನೋಡಿ ವರಗಳು ಹತ್ತದಿದ್ದಕ್ಕೆ ಅದರಲ್ಲೇ ನೋಡಿ ಧಾಡಸಿ ಮತ್ತು ಆಟೀಟು ಹೊಲ ಮನಿ ಇರೊ ಸಂಗಪ್ಪನಿಗೆ ಇವಳನ್ನು ಮದುವೆ ಮಾಡಿ ಕೊಟ್ಟಿದ್ದ ಅವರಪ್ಪ. ಸಣ್ಣವಳಿದ್ದಾಗಲೇ ಅವ್ವನನ್ನು ಕಳೆದುಕೊಂಡಿದ್ದ ಸಂಗವ್ವಕ್ಕನಿಗೆ ಅಪ್ಪನೇ ಎಲ್ಲಾ ಆಗಿದ್ದ. ಈಕೆ ಮದುವೆಯಾಗಿ ಕೆಲ ದಿನಗಳಿಗೆ ಮಗಳ ಕಷ್ಟ ನೋಡಿ ಏನೂ ಮಾಡಲಾಗದೆ ಜೀವಕ್ಕೆ ಹಚ್ಚಿಕೊಂಡು ಸತ್ತು ಹೋದ. ಅವ್ವ, ಅಪ್ಪನಿಲ್ಲದ ಮ್ಯಾಲೆ ತಮ್ಮನ ಹೆಂಡಿರ ಆಳ್ವಿಕೆಯ ತವರು ಸಂಗವ್ವಕ್ಕನಿಗೆ ರುಚಿಸಲಿಲ್ಲ. ಹೆಂಗೋ ಚೆನ್ನಾಗಿರೊ ಎರಡು ಗೌರಿಯರಂತ ಎರಡು ಹೆಣ್ಣುಮಕ್ಕಳೂ ಆದವು. ಎರಡು ಹೆಣ್ಣಿನ ಮೇಲೆ ಒಂದು ಗಂಡು ಮಗುವೂ ಹುಟ್ಟಿತ್ತು. ವಾರಗಟ್ಟಲೆ ಜ್ವರ ಬಡಿದು ಆರೈಕೆ ಇಲ್ಲದೆ ಸಿವನ ಪಾದ ಸೇರಿತ್ತು. ಈಗಿರೋದು ಹರೆಯದ ಹೊಸ್ತಿಲಲ್ಲಿರೊ ಶಾಂತಿ ಮತ್ತು ಆಕೆಯ ತಂಗಿ ನಂದಿ ಮಾತ್ರ. ನಂದಿಗೆ ಆಗಲೇ ಗೋವಾದಲ್ಲಿ ಕೆಲಸ ಸಿಕ್ಕಿತ್ತು. ನಾಲ್ಕನೇ ಇಯತ್ತೆ ಇನ್ನೂ ಪಾಸು, ನಪಾಸು ತಿಳಿಯೊ ಮೊದಲೇ ಸೌಕಾರ ಕೋಮಲಾಳಿಗೆ ಹೆರಿಗೆಯಾಗಿ ಆರು ತಿಂಗಳ ಕೂಸನ್ನು ಎತ್ತಿ ಆಡಿಸಲು ಗೋವಾದಂತಹ ಊರಲ್ಲಿ ವಿಶ್ವಾಸಿಗರು ಸಿಗದೆ, ಊಟ ಬಟ್ಟೆ ಕೊಟ್ಟು ವರ್ಷಕ್ಕೆ ಇಪ್ಪತ್ತು ಸಾವಿರ ಪಗಾರದ ಶರತ್ತಿನ ಮ್ಯಾಲೆ ಸಂಗಪ್ಪ ನಂದಿಯನ್ನ ಜೀತಕ್ಕೆ ಅಟ್ಟಿ ಎರಡು ವರ್ಷಗಳೇ ಆಗಿತ್ತು. ವರ್ಷಕ್ಕೆ ಒಂದೆರಡು ಸಲ ಊರಿಗೆ ಬರುತ್ತಿದ್ದ ಅವಳು ಗೋವಾದ ಹವಾಮಾನಕ್ಕೆ ಬೆಳ್ಳಗೆ ಮೈಕೈ ತುಂಬಿಕೊಂಡು ಚೆಂದವಾಗಿಯೇ ಕಾಣುತ್ತಿದ್ದಳು. ಊರಲ್ಲಿ ಯಾವ ಆಸೆಯೂ ಆಕೆಗೆ ಉಳಿದಂತೆ ಕಾಣುತ್ತಿರಲಿಲ್ಲ. ಉಮೇದಿನಿಂದಲೇ ಗೋವಾಕ್ಕೆ ಮರಳುತ್ತಿದ್ದಳು. ಅವಳ ಬಗ್ಗೆ ಸಂಗವ್ವಳೂ ಕೂಡ ನಿಸ್ಕಾಳಜಿ ಧೋರಣೆ ತೋರಿಬಿಟ್ಟಿದ್ದಳು.

ಈಗ ಆರು ತಿಂಗಳ ಹಿಂದಷ್ಟೇ ದೊಡ್ಡವಳಾದ ಶಾಂತಿಯನ್ನ ಏನು ಮಾಡುವುದೆಂಬ ಗೇನಿಕೆಯಲ್ಲಿಯೇ ಸಂಗಪ್ಪ ಇದ್ದಾಗಲೇ ಸಂಜೆ ಮಳ್ಯಾನ ಸೆರೆ ಅಂಗಡಿಯಲ್ಲಿ ದಲಾಲನೊಬ್ಬ ಸಂಗಪ್ಪನಂತವನಿಗೆ ಶುಭಸುದ್ದಿ ತಂದು ಬಿಟ್ಟಿದ್ದ. ಗುಜ್ಜರ ವರನೊಬ್ಬನಿಗೆ ಹೆಣ್ಣೊಂದರ ಬೇಡಿಕೆ ಇರುವುದಾಗಿ ಹೇಳಿದ್ದ. ಅಂದಿನಿಂದ ಅದೇ ಯೋಜನೆಯಲ್ಲಿದ್ದ ಸಂಗಪ್ಪ, ಐವತ್ತು ಸಾವಿರದ ತನಕ ರೊಕ್ಕ ಸಿಗುವುದಾದರೆ ಗುಜ್ಜರನೊಂದಿಗೆ 'ಯಾದಿ ಮ್ಯಾಲ ಶಾದಿ' ಮಾಡಿಬಿಡಬೇಕೆಂದು ತನ್ನೊಳಗೇ ನೆಕ್ಕಿ ಮಾಡಿಕೊಂಡಿದ್ದ. ಅಂದಿನಿಂದ ಶಾಂತಿಯ ಮೇಲೆ ಚೂರು ಕಾಳಜಿ ತೋರಿಸಿದಂಗೆ ಮಾಡೋದು. ಬೆರೆಸಿ ಬೆರೆಸಿ ಮಾತಾಡಿಸೋದು ಶುರು ಮಾಡಿದ್ದ. ಆದರೆ ಇವತ್ತು ಅವರು ಚಂದ ಕಾಣುವಂತೆ ತಯಾರಾಗಿ ಅಲ್ಲೀಕೇರಿಗೆ ಹೋಗೋದು ನೋಡಿ ಪೂರ್ವಾಪರ ತಿಳಿಯದೆ ಹಂಗೆಲ್ಲ ಬೈಗುಳಗಳ ಸುರಿಮಳೆ ಸುರಿಸಿದ್ದ. ಬೆಳೆದು ನಿಂತ ಮಗಳು ಚೆಂದಾಗಿ ತಯಾರಾದದ್ದು ನೋಡಿ ಹಂಗೆ ಬುಸುಗುಟ್ಟಿದ್ದ. ಸಂಗಪ್ಪನ ಸೆರೆ ಪಾಕೀಟೊಂದು ಅಕ್ಷಯಪಾತ್ರೆಯಾಗುವ ಲೆಕ್ಕಪತ್ರವೆಲ್ಲ ಹೆಚ್ಚುಕಡಿಮೆ ಫೈನಲ್ ಆದಂಗಿತ್ತು. ಸಾಲಿ ಸಮುದ ಯಾವ ತಾಪತ್ರಯ ಇಲ್ಲದೆ ಮದುವಿ ಮುಂಜಿ ಯಾವ ಜಂಜಾಟ ಇಲ್ಲದೆ ಮಗಳನ್ನು ಸೀದಾ ದಳಿದೇಬಿಡುವ ಯೋಜನೆ ಮತ್ತು ಯೋಚನೆ ಅದಾಗಿತ್ತು.

ಖರ್ಚು ಮಾಡಿ ಮದುವೆ ಮಾಡುವ ಇರಾದೆಯಾಗಲಿ ಆಸೆಯಾಗಲಿ ಸಂಗಪ್ಪನಿಗೆ ಎಂದೂ ತಲೆಯೊಳಗೆ ಹೊಳೆದದ್ದೇ ಇಲ್ಲ. ಸೆರೆ ಕುಡಿದು ಮಾಡಿದ ಸಾಲಗಳಿಂದಲೇ ಇದ್ದಬದ್ದ ಹೊಲ ಎಲ್ಲ ಹಳ್ಳ ಹಿಡಿದು ಹೋಗಿತ್ತು. ಸಂಗವ್ವಕ್ಕನ ಮೈಮ್ಯಾಲೆ ತವರಿನವರು ಹಾಕಿದ ಎರಡು ತೊಲೆ ಬಂಗಾರದಲ್ಲಿ ತಾಳಿಯೊಂದನ್ನು ಬಿಟ್ಟು ಒಂದು ಗುಂಜಿ ಬಂಗಾರ ಉಳಿಸಿರಲಿಲ್ಲ. ಮೂಗುಬೊಟ್ಟೂ ಒಂದು ದಿನದ ಸೆರೆಗಾಗಿ ಮಾರಿಕೊಂಡಿದ್ದ. ಬರಿಗಿವಿಯಲ್ಲಿರಬಾರದೆಂದು